

## ಮನೆ ಊಟ ಪ್ರಿಯ!

ಕುಟುಂಬದ ಸದಸ್ಯರ ಮೇಲೆ ಅತಿಯಾಗಿ ಕಾಳಜಿ ವಹಿಸಿದ್ದರು. ಪತ್ನಿ ಮಧುರಾ ಪಂಡಿತ್ ಸಿನಿಮಾ ನಿರ್ದೇಶಕಿ. ಮಗ ಶಾರಂಗ್‌ದೇವ್ ಸಂಗೀತ ನಿರ್ದೇಶಕ. ಮಗಳು ದುರ್ಗಾ ಜಸರಾಜ್ ಸಂಗೀತ ಸಂಘಟಕಿ. ಅವರು 'ಆರ್ಟ್ ಅಂಡ್ ಆರ್ಟಿಸ್ಟ್' ಎಂಬ ಸಂಸ್ಥೆ ಹುಟ್ಟುಹಾಕಿ ಹಲವಾರು ಕಛೇರಿಗಳನ್ನು ದೇಶಾದ್ಯಂತ ಸಂಘಟಿಸುತ್ತಿದ್ದಾರೆ.

ಜಸರಾಜ್ ಎಲ್ಲ ಕೌಟುಂಬಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಶುದ್ಧ ಸಸ್ಯಾಹಾರಿ. ಮನೆ ಊಟವನ್ನೇ ಬಯಸುತ್ತಿದ್ದರು. ಹೋಟೆಲ್‌ನಲ್ಲಿ ವಾಸ ಇದ್ದರೂ ಯಾರದ್ದಾದರೂ ಶಿಷ್ಯರ, ಸ್ನೇಹಿತರ ಮನೆಯಿಂದಲೇ ಊಟ ಬರುತ್ತಿತ್ತು. ದಾಲ್–ಚಪಾತಿ ಸೇವಿಸುತ್ತಿದ್ದರು. ಸಿಹಿಯಿಂದ ದೂರ ಇರುತ್ತಿದ್ದರು. ಕ್ರಿಕೆಟ್ ಮ್ಯಾಚ್ ನೋಡುವುದು, ರಾಜಕೀಯ ಆಗುಹೋಗು ತಿಳಿದುಕೊಳ್ಳುವುದು, ಸಿನಿಮಾ, ಟೀವಿ ನೋಡುವುದು, ಜನರನ್ನು ಭೇಟಿ... ಇವಕ್ಕೆಲ್ಲ ಅವರ ಜೀವನದಲ್ಲಿ ಬಹಳ ಮಹತ್ವವಿತ್ತು.

ಕಾಳಜಿ ಬೆಳೆಸಿಕೊಂಡಿದ್ದರು. ಮನೆಯವರನ್ನು ಮಾತ್ರವಲ್ಲ, ಹೊರಗಿನವರನ್ನೂ ಬಹಳ ಪ್ರೀತಿಸುತ್ತಿದ್ದರು, ಚೆನ್ನಾಗಿ ಸತ್ಕರಿಸುತ್ತಿದ್ದರು!

ಅವರನ್ನು ಎಲ್ಲರೂ 'ರಸರಾಜ್ ಪಂ. ಜಸರಾಜ್' ಎಂದು ಕರೆಯುತ್ತಿದ್ದರು. ರಸರಾಜ್ ಎಂದರೆ 'ಕಿಂಗ್ ಆಫ್ ರಸ'. ರಸ ಎಂದರೆ ಮ್ಯಾಜಿಕ್. ಮೇವಟಿ ಘರಾಣೆಯ ಗಾಯನದಲ್ಲಿ ತಂತ್ರಗಾರಿಕೆ, ಅಲಂಕಾರಿಕ ಅಂಶಗಳು ಬಹಳ ಕಷ್ಟಕರವಾಗಿರುತ್ತಿದ್ದವು. ರಸ ಎಂದರೆ ಅವರ ದೃಷ್ಟಿಯಲ್ಲಿ ಅದು 'ಮಾಸ್ ಅಪೀಲ್'.

ಅವರ ಪ್ರತಿಯೊಂದು ಕಛೇರಿಯೂ ಭಿನ್ನವಾಗಿರುತ್ತಿತ್ತು. ಒಂದು ಕಛೇರಿಯಲ್ಲಿ ಹಾಡಿದ ರಾಗ ಇನ್ನೊಂದೆಡೆ ಹಾಡುತ್ತಿರಲಿಲ್ಲ. ಅಢಾಣ ಕಾನಡ, ಪೂರಿಯ ಧನಾಶ್ರೀ, ಮಾರ್ವ, ಭೀಮಪಲಾಸಿ, ಮೇಘ ಮಲ್ಹಾರ್, ಭಿಲಾಸ್‌ಖಾನಿ ತೋಡಿ... ಹೀಗೆ ಎಲ್ಲ ರಾಗಗಳಲ್ಲೂ ವಿಶಿಷ್ಟ ಸ್ವಾದ ಇರುತ್ತಿತ್ತು. ಅಢಾಣ ಕಾನಡ ರಾಗದ 'ಮಾತಾ ಕಾಲಿಕಾ...' ಭಜನ್ ವಿಶ್ವಪ್ರಸಿದ್ಧ. ಲಂಡನ್, ಜರ್ಮನಿ, ದುಬೈ, ಅಮೆರಿಕ, ಕೆನಡಾ ಎಲ್ಲ ಕಡೆಗಳಿಗೂ ಅವರೊಂದಿಗೆ ಹೋಗಿ ಹಾಡಿದ್ದೆ. ತಮ್ಮ ಶಾರೀರ, ಶರೀರ ಎರಡರ ಬಗ್ಗೆಯೂ ಬಹಳ ಕಾಳಜಿ ಇರುತ್ತಿತ್ತು. ಕಛೇರಿ ನಡೆಯುವ ಸ್ಥಳಕ್ಕೆ ಸುಮಾರು ಒಂದೂವರೆ ಗಂಟೆ ಮುಂಚಿತವಾಗಿ ಹೋಗಿ ಸ್ವರಮಂಡಲ, ತಂಬೂರ ಟ್ಯೂನಿಂಗ್ ಮುಗಿಸಿ ಸಂಗೀತದತ್ತವೇ ಸಂಪೂರ್ಣ ಗಮನ. 'ಬೇಟಾ ಸ್ವರೋಂಕೊ ಪ್ಯಾರ್ ಕರೊ, ಶೃಂಗಾರ್ ಕರೊ' ಎಂದು ನನಗೆ ಯಾವಾಗಲೂ ಹೇಳುತ್ತಿದ್ದರು. ಇಂತಹ ಮಹಾನ್ ತಾರೆಯನ್ನು ಬೇರೆ ಕಲಾವಿದರೊಂದಿಗೆ ಹೋಲಿಸಲು ಸಾಧ್ಯವೇ ಇಲ್ಲ. ಅವರೇ ನನ್ನ ಗುರೂಜಿ, ಪಂ. ಜಸರಾಜ್ ಜಿ!.



1984ರಲ್ಲಿ ಪುಣೆಯ ಸವಾಯ್ ಗಂಧರ್ವ ಉತ್ಸವದಲ್ಲಿ ಪಂ. ಜಸರಾಜ್ ಜೊತೆಗೆ ಸಹಗಾಯನ ನಡೆಸಿದ ಸಂಜೀವ್ ಅಭ್ಯಂಕರ್.